**ಮೆ. ನ್ಯಾಷನಲ್ ಮೈನಿಂಗ್ ಕಂಪನಿ, ಇವರು ಸರ್ವೆ ನಂಬರ್ 25, ಚಿಕ್ಕಕಾಸನಕಂಡಿ ಗ್ರಾಮ, ಕೊಪ್ಪಳ ತಾಲೂಕು ಮತ್ತು ಜಿಲ್ಲೆಯಲ್ಲಿ ಒಟ್ಟು 8.09 ಹೆಕ್ಟೇರ್ (20.00 ಎಕರೆ) ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 2,00,058 ಟನ್ ಸಾಮರ್ಥ್ಯದ ಬಿಳಿ ಬೆಣಚುಕಲ್ಲು/ ಸ್ಪಟಿಕ ಶಿಲೆಗಳ ಗಣಿಗಾರಿಕೆಯ ಪ್ರಸ್ತಾವನೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಉದ್ದೇಶಿತ ಯೋಜನೆಯ ಸ್ಥಾಪನೆಯ ಹಿನ್ನೆಲೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.**

ದಿನಾಂಕ : 21.09.2021.

ವೇಳೆ : ಬೆಳಿಗ್ಗೆ 11:00 ಘಂಟೆ,

ಸ್ಥಳ : ಉದ್ದೇಶಿತ ಯೋಜನೆಯ ಪ್ರದೇಶ, ಮೆ. ನ್ಯಾಷನಲ್ ಮೈನಿಂಗ್ ಕಂಪನಿ, ಸರ್ವೆ ನಂಬರ್ 25, ಚಿಕ್ಕಕಾಸನಕಂಡಿ ಗ್ರಾಮ, ತಾಲೂಕು ಮತ್ತು ಜಿಲ್ಲೆ-ಕೊಪ್ಪಳ

ಮೆ. ನ್ಯಾಷನಲ್ ಮೈನಿಂಗ್ ಕಂಪನಿ, ಸರ್ವೆ ನಂಬರ್ 25, ಚಿಕ್ಕಕಾಸನಕಂಡಿ ಗ್ರಾಮ, ತಾಲೂಕು ಮತ್ತು ಜಿಲ್ಲೆ-ಕೊಪ್ಪಳ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 21.09.2021 ರಂದು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ, ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಉದ್ದೇಶಿತ ಯೋಜನೆಯ ಪ್ರದೇಶ, ಮೆ. ನ್ಯಾಷನಲ್ ಮೈನಿಂಗ್ ಕಂಪನಿ, ಸರ್ವೆ ನಂಬರ್ 25, ಚಿಕ್ಕಕಾಸನಕಂಡಿ ಗ್ರಾಮ, ತಾಲೂಕು ಮತ್ತು ಜಿಲ್ಲೆ-ಕೊಪ್ಪಳ |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | : | ಅನುಬಂಧ-5 |
| ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಹವಾಲುಗಳು | : | ಅನುಬಂಧ-6 |
| ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ.ಗಳು | : | ಅನುಬಂಧ-7 |
| ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಫೋಟೋ ಗಳ ಸಿ.ಡಿ ಗಳ | : | ಅನುಬಂಧ-8 |

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ ದಿನಾಂಕ 14-09-2006 (ತಿದ್ದುಪಡಿ ದಿನಾಂಕ: 01-12-2009) ರ ಪ್ರಕಾರ ಯಾವುದೇ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯುವ ಪೂರ್ವದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಪಡೆಯಬೇಕಾಗಿರುತ್ತದೆ. ಈ ನಿಟ್ಟನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ.

ಗಣಿ ಮತ್ತು ಭೂ-ವಿಜ್ಞಾನ ಇಲಾಖೆ ಪತ್ರದ ಸಂಖ್ಯೆ: ಡಿ.ಎಮ್../ಎಸ್‌ಜಿ/ಎಸ್‌ಕ್ಯೂ/2020-21/1537, ದಿನಾಂಕ: 06.08.2020 ರಂದು ಕ್ವಾರಿ ಯೋಜನೆಯನ್ನು ಅನುಮೋದಿಸಿ ಪತ್ರ ಸಂಖ್ಯೆ: MG004S200000388 ರನ್ವಯ ಗುತ್ತಿಗೆ ಗರಿಷ್ಠ 200,058 ಟನ್/ವಾರ್ಷಿಕ ಉತ್ಪಾದನೆಗೆ ಅನುಮೋದಿತ ಗಣಿಗಾರಿಕೆ ಯೋಜನೆಯನ್ನು ಹೊಂದಿದೆ.

ಕೇಂದ್ರ ಅರಣ್ಯ ಮತ್ತು ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರಕಾರ (ಆಘಾತ ಅಧ್ಯಯನ ವಿಭಾಗ) ನವದೆಹಲಿ, ಇವರ ಇ.ಐ.ಎ ಅಧಿಸೂಚನೆ ದಿನಾಂಕ:14-09-2006 ರ ಪ್ರಕಾರ ಈ ಗಣಿಗಾರಿಕೆ ಯೋಜನೆಯು ಬಿ-1 ವರ್ಗವೆಂದು ಪರಿಗಣಿಸಲಾಗಿದೆ. ಯೋಜನೆ ಚಟುವಟಿಕೆ 1 (ಎ) ಇ.ಐ.ಎ ಅಧಿಸೂಚನೆ ಪರಿಸರ ಮಟ್ಟದ ಪ್ರಭಾವದ ಮೌಲ್ಯಮಾಪನ (ಇ.ಓ.ಎ) ಮತ್ತು ಪರಿಸರ ನಿರ್ವಹಣಾ ಯೋಜನೆ (ಇ.ಎಂ.ಪಿ) ನಿಯಮಗಳ ಉಲ್ಲೇಖದ (ಟಿ.ಓ.ಆರ್) ಆದಾರದ ಮೇಲೆ ಸದರಿ ಯೋಜನೆಯ **Standards Terms of Reference** ಅನ್ನು ಪತ್ರ SEIAA 455 MIN 2020 ನ್ನು ದಿನಾಂಕ: 24.06.2021 ರಂದು ಅಂತಿಮಗೊಳಿಸಿ ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸುವಂತೆ **ಮೆ. ನ್ಯಾಷನಲ್ ಮೈನಿಂಗ್ ಕಂಪನಿ,** ಇವರು ತಿಳಿಸಿರುತ್ತಾರೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 21.09.2021 ರಂದು ದಿನಾಂಕವನ್ನು ಸೂಚಿಸಿ ಸಭೆಯನ್ನು ನಡೆಸಲು ತಿಳಿಸಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ. ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ "ವಿಜಯ ಕರ್ನಾಟಕ " (ಕನ್ನಡ), "ದಿ ನ್ಯೂ ಇಂಡಿಯನ್ ಎಕ್ಸಪ್ರೆಸ್" (ಆಂಗ್ಲ ಭಾಷೆ) ಯಲ್ಲಿ ದಿನಾಂಕ: 21.08.2021 ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ "ನಾಗರೀಕ" ದಿನ ಪತ್ರಿಕೆಯಲ್ಲಿ ದಿನಾಂಕ: 22.08.2021 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 22.09.2021 ರಂದು ಬೆಳಿಗ್ಗೆ 11:00 ಘಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

**ಶ್ರೀ ಕೆ. ರಾಜು,** ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಕೊಪ್ಪಳ ಹಾಗೂ ಹಿರಿಯ ಪರಿಸರ ಅಧಿಕಾರಿಗಳು (ಹೆಚ್ಚುವರಿ ಪ್ರಭಾರ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಬಳ್ಳಾರಿ ಇವರು **ಶ್ರೀ ವಿಕಾಸ್ ಕಿಶೋರ್ ಸುರಳ್ಕರ್** ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ ರವರಿಗೆ ಮತ್ತು ಕೊಪ್ಪಳ ತಹಶೀಹಲ್ದಾರ ರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಗಣಿಗಾರಿಕೆ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ತಾಂತ್ರಿಕ ಸಲಹೆಗಾರರಾದ ಮೆ: ಗ್ಲೋಬಲ್ ಎನ್ವಿರಾನ್ಮೆಂಟ್ & ಮೈನಿಂಗ್ ಸರ್ವಿಸಸ್ ಇವರು ಸದರಿ ಯೋಜನೆಯ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.

ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು/ಅಹವಾಲುಗಳು ಈ ಕೆಳಗಿನಂತಿವೆ.

**1) ಶ್ರೀ ರೋಹಿತ್ ಪಾಟೀಲ್, ಚಿಕ್ಕಕಾಸನಕಂಡಿ ಗ್ರಾಮ**

ಸಭೆಯ ಗಣ್ಯಮಾನ್ಯರಿಗೆಲ್ಲರಿಗೂ ಹಾಗೂ ಸಭೆಯಲ್ಲಿ ಭಾಗಿಯಾದಂತಹ ಸಾರ್ವಜನಿಕರಿಗೂ ನನ್ನ ನಮಸ್ಕಾರಗಳು, ನಾನು ಮಾಜಿ ಗ್ರಾಮ ಪಂಚಾಯತಿ ಮೆಂಬರ್ ಈ ನ್ಯಾಷನಲ್ ಕಂಪನಿ ಪ್ರಾರಂಭವಾದ್ದರಿಂದ ನಮಗೆ ಉದ್ಯೋಗ ಸಿಗುತ್ತದೆ ಇನ್ನು ಹೆಚ್ಚಿನ ರೀತಿಯಲ್ಲಿ ಅನುಕೂಲಗಳನ್ನು ಮಾಡಿಕೊಡಬೇಕು ನಮ್ಮೂರಿಗೆ ಯಾವುದೇ ಸವಲತ್ತುಗಳಿಲ್ಲ ಈ ಕಂಪನಿ ಆಗುವುದರಿಂದ ಇದರಿಂದ ಸವಲತ್ತುಗಳಾಗುತ್ತವೆ ನಮ್ಮೂರಿಗೆ ಕೆಲಸಗಳು ದೊರೆಯುತ್ತದೆ. ನಮ್ಮೂರಿನಲ್ಲಿ ಅನೇಕ ಹುಡುಗರು, ಶಾಲೆ ಹುಡುಗರಿದ್ದಾರೆ ಅವರಿಗೆ ಕೆಲಸ ನೀಡಬೇಕು ರಸ್ತೆ ಅಭಿವೃದ್ಧಿ ಮಾಡಬೇಕು, ಶೌಚಾಲಯ, ಶಾಲೆಗಳ ಅಭಿವೃದ್ದಿ ಪಡಿಸಬೇಕು ಎಲ್ಲಾ ಅನುಕೂಲಗಳು ಈ ಕಂಪನಿ ಪ್ರಾರಂಭಿಸಿದರೆ ಎಲ್ಲಾ ಅನುಕೂಲಗಳಾಗುತ್ತದೆ ಎಂದು ಹೇಳಿ ಸಭೆಗೆ ವಂದಿಸಿದರು.

**2) ಶ್ರೀ ಮಂಜುನಾಥ, ಚಿಕ್ಕಕಾಸನಕಂಡಿ ಗ್ರಾಮ**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೆ ಹಾಗೂ ಪರಿಸರ ಅಧಿಕಾರಿಗಳಿಗೆ ಸಭೆಯಲ್ಲಿ ಹಾಜರಿರುವ ಎಲ್ಲಾ ಸಾರ್ವಜನಿಕರಿಗೂ ನನ್ನ ನಮಸ್ಕಾರಗಳು ಸಭೆಯ ಗಣ್ಯಮಾನ್ಯರಿಗೆಲ್ಲರಿಗೂ ಹಾಗೂ ಸಭೆಯಲ್ಲಿ ಭಾಗಿಯಾದಂತಹ ಸಾರ್ವಜನಿಕರಿಗೂ ನನ್ನ ನಮಸ್ಕಾರಗಳು.

ಈ ಕಂಪನಿ ಪ್ರಾರಂಭವಾದರೆ ಉದ್ಯೋಗದ ಅವಕಾಶಗಳು ಸಿಗುತ್ತವೆ. ಇಂತಹ ಕೈಗಾರಿಕೆಗಳಿಂದ ಅನುಕೂಲಗಳಾಗುತ್ತವೆ ಇದರಿಂದ ನಮ್ಮ ಹಳ್ಳಿಗೆ ಒಳ್ಳೆಯದಾಗುವುದರ ಜೊತೆಗೆ ನಮಗೆ ಉದ್ಯೋಗ ದೊರಕುತ್ತದೆ ಎಂದು ಸಭೆಗೆ ನಮಸ್ಕರಿಸಿ ಮುಕ್ತಾಯಗೊಳಿಸುತ್ತೇನೆ ಎಂದು ತಿಳಿಸಿದರು.

**3) ಶ್ರೀ ದೇವೇಂದ್ರಪ್ಪ ಡೊಳ್ಳಿನ್, ಹಿರೇಕಾಸನಕಂಡಿ, ಎಸ್.ಡಿ.ಎಮ್.ಸಿ ಅಧ್ಯಕ್ಷರು**

ಈ ನ್ಯಾಷನಲ್ ಕಂಪನಿ ಪ್ರಾರಂಭದಿಂದ ಬಹಳ ಅನುಕೂಲವಾಗುತ್ತದೆ ಯಾಕೆಂದರೆ ಈಗಾಗಲೇ ನಮ್ಮ ಸುತ್ತಮುತ್ತಲಿನ ಗ್ರಾಮಗಳಿಗೆ ಜಿಲ್ಲಾಧಿಕಾರಿಗಳಿಗೆ ಮನವಿ ಕೊಟ್ಟಿದ್ದೇವೆ ಕಾಸನಕಂಡಿ ರಸ್ತೆಗೆ ಪರಿಸರ ಸಂರಕ್ಷಣೆಗೆ ಮನವಿ ಮಾಡಿದ್ದೇವೆ ನಮ್ಮೂರು ಬಹಳ ಹಿಂದುಳಿದಿದೆ. ಈ ಯೋಜನೆಯ ಪ್ರಕಾರ ಎಲ್ಲಾ ಯಶಸ್ವಿಗೊಳಿಸಬೇಕು ರಸ್ತೆಗಳು ಬಹಳ ಹಾನಿಯಾಗಿದೆ ಗಿಣಿಗೇರಾ ಇಂದ ಹಿರೇಬಗನಾಳ ವರೆಗೆ ರಸ್ತೆ ಅಭಿವೃದ್ಧಿ ಪಡಿಸಲು ಮನವಿ ಮಾಡಿದ್ದೇವೆ ಹಿರೇಕಾಸನಕಂಡಿ ರಸ್ತೆಗಳು ಬಹಳ ಹಾಳಾಗಿವೆ ಪರಿಸರ ಸಂರಕ್ಷಣೆ ಯೋಜನೆ ಪ್ರಕಾರ ಅಭಿವೃದ್ಧಿಗೊಳಿಸಬೇಕು, ನಾವು ಸಹಕಾರ ಕೊಡುತ್ತೇವೆ ನಿರುದ್ಯೋಗ ಸಮಸ್ಯೆಯನ್ನು ಹೊಗಲಾಡಿಸಬೇಕು, ಬಹಳ ಹಿಂದೆ ಇದ್ದೇವೆ, ನಮ್ಮೂರು ಬಹಳ ಹಿಂದುಳಿದಿದೆ ಸುತ್ತಮುತ್ತಲ ಹಳ್ಳಿಗಳಿಗಿಂತ ನಮ್ಮೂರು ಬಹಳ ಹಿಂದೂಳಿದಿದೆ ರಸ್ತೆ ಕಾಮಗಾರಿ ಅಭಿವೃದ್ಧಿ ಪಡಿಸಲು ವಿಶೇಷವಾಗಿ ಮನವಿ ಮಾಡುತ್ತೇವೆ. ಪರಿಸರ ಸಾರ್ವಜನಿಕ ಸಭೆಗೆ ನಮ್ಮೆಲ್ಲರ ಬೆಂಬಲವಿದೆ. ಇದು ಯಶಸ್ವಿಗೊಳ್ಳಲಿ ಎಂದು ನಮಸ್ಕರಿಸಿ ಮುಕ್ತಾಯಗೊಳಿಸುತ್ತೇನೆ ಎಂದು ತಿಳಿಸಿದರು.

**4) ಶ್ರೀ ವಿಶ್ವನಾಥ ಮಾರಕಟ್ಟೆ, ಹಿರೇಕಾಸನಕಂಡಿ, ಗ್ರಾಮ ಪಂಚಾಯತಿ ಸದಸ್ಯರು**

ಇವತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುತ್ತಿದ್ದಾರೆ, ಜಿಲ್ಲಾಧಿಕಾರಿಗಳು ಆಗಮಿಸಿದ್ದಾರೆ ಅವರಲ್ಲಿ ನನ್ನ ಮನವಿ ಏನೆಂದರೆ, ಹಿರೇಕಾಸನಕಂಡಿಯಲ್ಲಿ ನಮ್ಮ ಎಲ್ಲಾ ಊರಿನ ಎಲ್ಲಾ ಊರಿನ ಯುವಕರು ಹೇಳಿದ್ದಾರೆ, ಹಿರೇಕಾಸನಕಂಡಿ ಯಲ್ಲಿ ನಮ್ಮ ಪರಿಸ್ಥಿತಿ ಹೇಗೆ ಇದೆ ಎಂದರೆ ನಮ್ಮ ಪರಿಸ್ಥಿತಿ ಬಹಳ ಕೆಟ್ಟದಿದೆ ನಮ್ಮೂರಿನಲ್ಲಿ 7ನೇ ಕ್ಲಾಸ್ ಪಾಸಾದರೆ 8ನೇ ಪರಗತಿಗೆ ಹಿರೇಬಗನಾಳ ಗೆ ಹೋಗಬೇಕು, ಹಿರೇಕಾಸನಕಂಡಿ ರಸ್ತೆ ದುರಸ್ತಿಯಲ್ಲಿದೆ. ಸುಮಾರು 8 ವರ್ಷದಿಂದ ದುರಸ್ತಿಯಾಗಿಲ್ಲ ಈಗ ಆಗಬೇಕು ಎಂದು ಮನವಿ ಮಾಡುತ್ತೇನೆ, ಹೊಸಹಳ್ಳಿ ಕಡೆಯಿಂದ ಪ್ರಾರಂಭವಾಗಿದೆ ಇನ್ನೂ ಒಳ್ಳೆಯ ರೀತಿಯಲ್ಲಿ ಆಗಬೇಕು ಎಂದು ತಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ ಅದೇ ರೀತಿ ನಮಗೆ ಹಿರೇಬಗನಾಳದಿಂದ ನಮಗೆ ವಿಸ್ತರಣೆ ಆಗುತ್ತದೆ ಎಂದು ಹೇಳಿದ್ದಾರೆ. ಜನಸಾಮಾನ್ಯರಿಗೆ ಬಸ್ ಇರುವುದಿಲ್ಲ, ಬೈಕ್ ಇರುವುದಿಲ್ಲ ಇನ್ನೂ ಬಹಳ ಅನೇಕ ಇದಾವೆ ಸುತ್ತಾ ಯಾವ ವಾಹನಗಳು ಓಡುವುದಿಲ್ಲ, 108 ನಮ್ಮೂರಿಗೆ ಬಂದಿರುವುದನ್ನು ನೋಡಿರುವುದಿಲ್ಲ ಅದೇ ರೀತಿ ಈ ಕಂಪನಿಯಿಂದ ತೊಂದರೆಯಾಗುವುದಿಲ್ಲ ಎಂದು ತಿಳಿದಿದ್ದೇವೆ. ಸುತ್ತಮುತ್ತಲಿನ ಪ್ರದೇಶವು ಸುಂದರವಾಗಿದೆ ಕಾಣುತ್ತಿದೆ, ಜಿಲ್ಲಾಧಿಕಾರಿಗಳಿಗೆ ಮನವಿ ಏನೆಂದರೆ ಇಲ್ಲಿ ಬಸ್ ಬರುತ್ತಿಲ್ಲ, ವಿದ್ಯಾರ್ಹತೆಯ ಆದಾರದ ಮೇಲೆ ಕಂಪನಿಯು ನೌಕರಿ ನೀಡಬೇಕು ಸ್ಥಳಿಯರಿಗೇನೆ ಹೆಚ್ಚಿನ ಆಧ್ಯತೆ ನೀಡಬೇಕು ಎಂದು ಹೇಳುತ್ತಾ ಕಂಪನಿಯು ಯಶಸ್ವಿಯಾಗಿ ನಡೆಸಲೆಂದು ಆಶಿಸುತ್ತೇನೆ. ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾದಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**5) ಶ್ರೀ ಫಕೀರಪ್ಪ ಮೇಟಿ, ಕೊಪ್ಪಳ ತಾಲೂಕು ಲಾರಿ ಅಸೋಷಿಯೇಷನ್ ಅಧ್ಯಕ್ಷರು**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೆ ಹಾಗೂ ಪರಿಸರ ಅಧಿಕಾರಿಗಳಿಗೆ ಸಭೆಯಲ್ಲಿ ಹಾಜರಿರುವ ಎಲ್ಲಾ ಸಾರ್ವಜನಿಕರಿಗೂ ಸ್ವಾಗತ. ಈ ಕಂಪನಿಯಾಗುವುದರಿಂದ ಲಾರಿಗಳಿಗೆ ದುಡಿಮೆ ಸಿಗುತ್ತೆ ಈ ಕಂಪನಿ ಆದರೆ ಲೋಕಲ್ ಜನರಿಗೆ ಕೆಲಸ ಸಿಗುತ್ತದೆ. ದಯಮಾಡಿ ಮನವಿ ಮಾಡುವುದೇನೆಂದರೆ

ಲೋಕಲ್ ನವರಿಗೆ ಹೆಚ್ಚು ಆಧ್ಯತೆ ನೀಡಿ ಎಂದು ಭರವಸೆ ಇದೆ ಅದನ್ನು ಉಳಿಸಿಕೊಳ್ಳಿ ಉದ್ಯೋಗ ನೀಡಿ. ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾದಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**6) ಶ್ರೀ ಗುರುಪಾದಯ್ಯ ತಂದೆ ಬಸಯ್ಯೆ, ಹಿರೇಕಾಸನಕಂಡಿ**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೆ ಹಾಗೂ ಪರಿಸರ ಅಧಿಕಾರಿಗಳಿಗೆ ಸಭೆಯಲ್ಲಿ ಹಾಜರಿರುವ ಎಲ್ಲಾ ಸಾರ್ವಜನಿಕರಿಗೂ ಸ್ವಾಗತ ನಮ್ಮ ಗ್ರಾಮ ಪಂಚಾಯತಿಯಲ್ಲಿ ಬರುವ ಗ್ರಾಮುಗಳಲ್ಲಿ ಓದಿರುವ ವಿದ್ಯಾರ್ಥಿಗಳೀದ್ದಾರೆ ಅವರನ್ನು ಬಿಟ್ಟು ಬೇರೆ ಜಿಲ್ಲೆಯ ಬಾಗಲಕೋಟೆ, ಬಿಜಾಪೂರ, ಗುಲಬರ್ಗಾ ಜಿಲ್ಲೆಯಿಂದ ಬಂದು ಕೆಲಸ ಮಾಡುತ್ತಾರೆ. ಆದರೆ ಇಲ್ಲಿ ನಮ್ಮ ವ್ಯಾಪ್ತಿಯಲ್ಲಿ ಓದಿದ ವಿದ್ಯಾರ್ಥಿಗಳು ಲೇಬರ್ ಕೆಲಸಕ್ಕೆ ಹೊಗುತ್ತಿದ್ದಾರೆ ಇದರ ಬಗ್ಗೆ ಯಾರು ಗಮನ ಹರಿಸುತ್ತಿಲ್ಲ ಅದಕ್ಕಾಗಿ ನಿಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಭಾಗದಲ್ಲಿ ಇರತಕ್ಕಂತಹ ಹೆಚ್ಚಿನ ಆಧ್ಯತೆ ನೀಡಿ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನ್ನ ಸ್ನೇಹಿತರಾದ ವಿಶ್ವನಾಥ್ ರವರು ಹೇಳಿದ ಹಾಗೆ ಪಡಿತರ ತರಲು ಸ್ವಂತ ಖರ್ಚಿನಲ್ಲಿ ಗಾಡಿ ಬಾಡಿಗೆ ಕೊಟ್ಟು ತರಬೇಕಾಗಿದೆ ಆದರೆ ಇದರ ಬಗ್ಗೆ ಯಾರು ಗಮನ ಹರಿಸುತ್ತಿಲ್ಲಾ ಅದಕ್ಕಾಗಿ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಎಲ್ಲರೂ ಈ ಕಡೆ ಗಮನ ಹರಿಸಿ ನಮ್ಮ ಹಳ್ಳಿಗೆ ಸವಲತ್ತು ಮಾಡಿಕೊಡಬೇಕು, ಶಾಲಾ ಮಕ್ಕಳ ಬಗ್ಗೆ ಗಮನ ಹರಿಸಬೇಕು ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾದಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**7) ಶ್ರೀ ನಿಂಗಪ್ಪ ಕುಣಿಕೇರಿ, ಹಿರೇಕಾಸನಕಂಡಿ ಗ್ರಾಮಸ್ಥರು**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೆ ಹಾಗೂ ಪರಿಸರ ಅಧಿಕಾರಿಗಳಿಗೆ ಸಭೆಯಲ್ಲಿ ಹಾಜರಿರುವ ಎಲ್ಲಾ ಸಾರ್ವಜನಿಕರಿಗೂ ಸ್ವಾಗತ. ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಅಧಿಕಾರಿಗಳು ಬರುತ್ತಾರೆ ಹೋಗುತ್ತಾರೆ ಆದರೆ ನಾವು ನಾಳೆ ಕಂಪನಿಯವರ ಜೊತೆ ಚೆನ್ನಾಗಿರಬೇಕು ಕಂಪನಿಯ ಮಾಲೀಕರು ನಾವು ಒಂದಾಗಿರಬೇಕು ನಮ್ಮ ಗ್ರಾಮವು ಹಿಂದುಳಿದಿದೆ ಯಾವುದೇ ಕಾರಣಕ್ಕು ಕಂಪನಿಯವರು ನಮ್ಮ ಗ್ರಾಮದವರನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು ನಮ್ಮನ್ನು ಒಂದಿಷ್ಟು ಕೈ ಹಿಡಿಯಬೇಕು ಇದರಿಂದ ನಮಗೂ ಒಳ್ಳಾಯದಾಗುತ್ತೆ ಅವರಿಗೂ ಒಳ್ಳೆಯದಾಗುತ್ತೆ, ನಾವು ಕಾಸನಕಂಡಿ ಗ್ರಾಮದ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮತ್ತು ತಹಶೀಲ್ದಾರ್ ರವರಿಗೆ ಸಾಕಷ್ಟು ಬಾರಿ ಹೇಳಿದ್ದೇವೆ, ಯಾಕೇ ನಮ್ಮ ರಸ್ತೆ ನೆನೆಗುದಿಗೆ ಬಿದ್ದಿದೆ ಎನ್ನುವುದು ಆ ಭಗವಂತನಿಗೆ ಗೊತ್ತು ಆಗುವುದೆಲ್ಲ ಒಳ್ಳೆಯದಕ್ಕೆ ಈ ಕಂಪನಿ ಮಾಲೀಕರಿಗೆ ಕೇಳುವುದೇನೆಂದರೆ ಹೊರಗಿನವರನ್ನು ಬಿಟ್ಟು ಸ್ಥಳೀಕರಿಗೆ ಅವಕಾಶ ನೀಡಿ ಲೋಕಲ್ ನವರು ಏನಾದರೂ ತೊಂದರೆ ಮಾಡಿದರೆ ಹಿರಿಯರಿರುತ್ತಾರೆ ಅವರನ್ನು ಕರೆಸಿ ಬುದ್ದಿ ಹೇಳೋಣ ಹೋರಗಡೆಯವರನ್ನು ದಯವಿಟ್ಟು ತರಬೇಡಿ, ಗ್ರಾಮದವರದು ಹಾಗೂ ಎಲ್ಲಾ ಜನಗಳದು ಬೆಂಬಲವಿರುತ್ತದೆ ಎಂದು ಹೇಳಿ. ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾದಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**8) ಶ್ರೀ ವೀರಬಸಯ್ಯೆ ಎಸ್. ಹಿರೇಮಠ**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೆ ಹಾಗೂ ಪರಿಸರ ಅಧಿಕಾರಿಗಳಿಗೆ ಸಭೆಯಲ್ಲಿ ಹಾಜರಿರುವ ಅದೇ ರೀತಿ ಎಲ್ಲಾ ಸಾರ್ವಜನಿಕರಿಗೂ ಸ್ವಾಗತ. ಎಲ್ಲಾ ಕಂಪನಿಗಳಿಗೂ ಅನುಮತಿ ನೀಡಿರುತ್ತೀರಿ ಆದರೆ ಕಂಪನಿಗಳು ಬೇರೆ ಕಡೆಯಿಂದ ಕೆಲಸಗಾರರನ್ನು ಕರೆಸಿ ಉದ್ಯೋಗ ನೀಡುತ್ತಾರೆ ಸ್ಥಳೀಯರಿಗೆ ಉದ್ಯೋಗ ನೀಡುವುದಿಲ್ಲ ಹಳ್ಳಿಗಳ ಹುಡುಗರಿಗೆ ಉದ್ಯೋಗ ನೀಡಬೇಕು ರಸ್ತೆ ದುರಸ್ತಿ ಮಾಡಿಕೊಡಬೇಕು, ಸ್ಥಳೀಯರಿಗೆ ಆಧ್ಯತೆ ನೀಡಿ, ಶಾಲಾ ಮಕ್ಕಳಿಗೆ ಆಧ್ಯತೆ ನೀಡಿ ತಾವು ಈ ಬಗ್ಗೆ ಆದೇಶ ನೀಡಬೇಕು ನಾವು ಹೋಗಿ ಕೇಳಿದರೆ

ಹೋರಾಟ ಮಾಡಿದರೆ ಬರುವುದಿಲ್ಲ ತಾವು ಸ್ಟ್ರಿಕ್ಟ್ ಆಗಿ ಹೇಳಿ ಸ್ಥಳೀಯರಿಗೆ ಉದ್ಯೋಗ ಒದಗಿಸಬೇಕು, ಓದಿದ ವಿದ್ಯಾರ್ಹತೆಗೆ ಅನುಗುಣವಾಗಿ ಕೆಲಸ ನೀಡಬೇಕು, ಕಂಪನಿಯವರು ಈ ಬಗ್ಗೆ ಗಮನ ಕೊಡುತ್ತಾರೆಂದು ಹೇಳಿ ಈ ಕಂಪನಿನಿ ಬಂದರೆ ನಮಗೆ ಮತ್ತು ಸುತ್ತ ಮುತ್ತಲ ಹಳ್ಳಿಗಳಿಗೆ ದುಡಿಯಲು ಅನುಕೂಲವಾಗುತ್ತದೆ ಅದೇ ರೀತಿ ಓದಿದವರಿಗೆ ಗೌರ್ನಮೆಂಟ್ ನಿಂದ ಭೂಮಿ ಇದ್ದರೂ ಒಂದು ಐ.ಟಿ.ಐ ಕಾಲೇಜಿಗೆ ಅನುಮತಿ ನೀಡಿ ತರಬೇತಿ ನೀಡಿ ಎಂದು ಹೇಳುತ್ತಾ ನನ್ನ ಎರಡು ಮಾತು ಮುಗಿಸುತ್ತೇನೆ. ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾಧಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**9) ಶ್ರೀ ಸುನಂದಾ ರೆಡ್ಡಿ, ಪರಿಸರವಾದಿ ಬಳ್ಳಾರಿ**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೆ ಹಾಗೂ ಪರಿಸರ ಅಧಿಕಾರಿಗಳಿಗೆ ಸಭೆಯಲ್ಲಿ ಹಾಜರಿರುವ ಎಲ್ಲಾ ಸಾರ್ವಜನಿಕರಿಗೂ ಸ್ವಾಗತ ಕೋರಿದರು. ನಾನು ಕೈಗಾರಿಕೆಯನ್ನು ಬೆಂಬಲಿಸುವ ಭಾರತದ ಮೊದಲ ಪರಿಸರವಾದಿ, ನನಗೆ 60 ವರ್ಷವಾಯಿತು ನಾನು ಇಂದಿನವರೆಗೂ ಯಾವುದೇ ಆರೋಗ್ಯ ಸಮಸ್ಯೆ ಇರುವುದಿಲ್ಲ ಯಾವುದೇ ತೊಂದರೆ ಅನುಭವಿಸುತ್ತಿಲ್ಲ, ಕೈಗಾರಿಕೆ ಅಭಿವೃದ್ಧಿ ಮತ್ತು ಪರಿಸರವು ಸುಬದ್ರವಾಗಿರಬೇಕು ಕಂಪನಿಯವರು ಈಗ ಗಾಳಿ, ನೀರು, ವಾಯು, ಶಬ್ಧದ ಬಗ್ಗೆ ಬೇಸ್‌ಲೈನ್ ಸ್ಟಡಿ ಮಾಡಿದ್ದಾರೆ ಇದು ಬಹಳ ಒಳ್ಳೆಯದು ನನ್ನ ವಿನಂತಿ ಏನೆಂದರೆ ಈ ಅಧ್ಯಯನವನ್ನು 10 ಕಿ.ಮೀ ವ್ಯಾಪ್ತಿಯಲ್ಲಿ ಮಾಡಿದರೆ ಒಳ್ಳೆಯದು ಮತ್ತು ಪರಿಸರ ಸಮತೋಲನವನ್ನು ಕಾಪಾಡುವುದು. ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕು. ನಿಮ್ಮ ಗಣಿಗಾರಿಕೆ 20 ಎಕರೆ ಭೂಮಿಯನ್ನು ಹೊಂದಿದೆ. ಈ ಭೂಮಿಯಲ್ಲಿ ವಾರ್ಷಿಕ 4 ಕೋಟಿ ಮಳೆ ನೀರು ಬಂದಿದೆ, ನನ್ನ ವಿನಂತೆ ಏನೆಂದರೆ ಮಳೆ ನೀರು ಸಂಗ್ರಹಿಸಲು ಕ್ರಮ ಕೈಗೊಳ್ಳಬೇಕು, ನೀರು ನಿಮ್ಮ ಉದ್ಯಮದಲ್ಲಿ ಉಪಯುಕ್ತ, ಮತ್ತು ಈ ಪ್ರದೇಶದಲ್ಲಿ ಅಂತರ್ಜಲ ಮಟ್ಟವನ್ನು ಅಭಿವೃದ್ಧಿ ಪಡಿಸಬೇಕು, ಧೂಳು ನಿಯಂತ್ರಣ ಔಷಧೀಯ ಸಸ್ಯಗಳ ಮೌಲ್ಯಗಳ ಬಗ್ಗೆ ಗಮನವಹಿಸಿ, ಉದ್ದಿಮೆಯಲ್ಲಿ ಸ್ಥಳೀಯರಿಗೆ ಆಧ್ಯತೆ ನೀಡಿ, ಉತ್ತಮ ಕೌಶಲ್ಯಗಳನ್ನು ಅಭಿವೃದ್ಧಿಗೊಳಿಸಿ, ನಿರುದ್ಯೋಗ ಯುವಕರಿಗೆ ಒಳ್ಳೆಯ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಿ, ತರಬೇತಿ ಪ್ರಕಾರ ಯುವಕರಿಗೆ ಕೈಗಾರಿಕೆಯಲ್ಲಿ ಉದ್ಯೋಗ ಪಡೆಯಲು, ಸಿ.ಎಸ್.ಆರ್ ಬಜೇಟ್ ಕ್ರೀಯಾ ಯೋಜನೆ ರೂಪಿಸಿ, ಸ್ಥಳೀಯರು ಮತ್ತು ಸರ್ಕಾರಿ ಅಧಿಕಾರಿಗಳು ಸಮನ್ವಯ ರೂಪಿಸಲು ನನ್ನ ವಿನಂತಿ, ಸರಿಯಾದ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿ ಗಾಳಿ, ನೀರು ಪರಿಸರವನ್ನು ಸಮತೋಲನದಲ್ಲಿಡಲು ಕ್ರಮ ಕೈಗೊಳ್ಳಿ, ನಿಮ್ಮ ಉದ್ಯಮದ ಅಭಿವೃದ್ಧಿಗೆ ನನ್ನ ಶುಭಾಶಯಗಳು ಹಾಗೂ ನನ್ನ ಬೆಂಬಲ, ಅಂತಿಮವಾಗಿ ನಾನು ಈ ಉದ್ದಿಮೆಗೆ ಅನುಮತಿ ನೀಡಲು ಬೆಂಬಲ ನೀಡುತ್ತೇನೆಂದು ಹೇಳಿದರು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾಧಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**10)ಶ್ರೀ ಹೆಚ್. ಮಾಧುಬಾಬು, ಪರಿಸರವಾದಿ ಬಳ್ಳಾರಿ**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೆ ಹಾಗೂ ಪರಿಸರ ಅಧಿಕಾರಿಗಳಿಗೆ ಸಭೆಯಲ್ಲಿ ಹಾಜರಿರುವ ಎಲ್ಲಾ ಸಾರ್ವಜನಿಕರಿಗೂ ಸ್ವಾಗತ ಕೋರಿದರು. ನನ್ನ ಶುಭ ಹಾರೈಕೆಗಳು ಮತ್ತು ಗಣಿಗಾರಿಕೆಯನ್ನು ಬೆಂಬಲಿಸುವುದು, ನನ್ನ ಅಭಿಪ್ರಾಯದಲ್ಲಿ ಕೈಗಾರಿಕೆಯನ್ನು ಬೆಂಬಲಿಸುವುದು ಅನೂಕುಲವಾಗುತ್ತದೆ. ನಿಮ್ಮ ಗಣಿಗಾರಿಕೆಯನ್ನು ಸರ್ಕಾರದ ನಿಯಮಗಳ ಪ್ರಕಾರ ಪ್ರಾರಂಭಿಸಿ, ಗಿಡ, ಮರಗಳನ್ನು ಬೆಳೆಸಿ, ಸ್ಥಳೀಯ ಹಳ್ಳಿಗಳ ಹೆಣ್ಣು ಮಕ್ಕಳನ್ನು ಗಣಿಗಾರಿಕೆಯಲ್ಲಿ ಉದ್ಯೋಗ ನೀಡಿ, ಬಡವರಿಗೆ ಇದರಿಂದ ಸಹಾಯವಾಗುತ್ತದೆ, ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾಧಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**11) ಶ್ರೀ ರವಿ ದೇವರಮನಿ, ಹಿರೇಬಗನಾಳ**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೆ ಹಾಗೂ ಪರಿಸರ ಅಧಿಕಾರಿಗಳಿಗೆ ಸಭೆಯಲ್ಲಿ ಹಾಜರಿರುವ ಎಲ್ಲಾ ಸಾರ್ವಜನಿಕರಿಗೂ ಸ್ವಾಗತ ಕೋರಿದರು. ನ್ಯಾಷನಲ್ ಮೈನಿಂಗ್ ಕಂಪನಿ ಇವತ್ತು ಪಬ್ಲಿಕ್ ಸಭೆ ಇದೆ ಇದಕ್ಕೆ ಮೊದಲನೆಯದಾಗಿ ನಾನು ಶುಭ ಹಾರೈಸುತ್ತೇನೆ. ಸುತ್ತಮುತ್ತಲ ಗ್ರಾಮಸ್ಥರು ನಾವು ಸಹಕಾರ ನೀಡುತ್ತೇವೆ ಇವರು ಹೆಚ್ಚಿನ ಅಭಿವೃದ್ಧಿ ಹೊಂದಲಿ ಎಂದು ತಿಳಿಸುತ್ತಾ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾದಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**12) ಶ್ರೀ ಕುಮಾರ ಮಜ್ಜಗಿ, ಅಲ್ಲಾನಗರ**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೆ ಹಾಗೂ ಪರಿಸರ ಅಧಿಕಾರಿಗಳಿಗೆ ಸಭೆಯಲ್ಲಿ ಹಾಜರಿರುವ ಎಲ್ಲಾ ಸಾರ್ವಜನಿಕರಿಗೂ ಸ್ವಾಗತ ಕೋರಿದರು. ನ್ಯಾಷನಲ್ ಮೈನಿಂಗ್ ಏನು ನಮ್ಮ ಊರ ಹತ್ತಿರ ಪ್ರಾರಂಭವಾಗುತ್ತಿದೆ, ಅದು ಇಲ್ಲಿರುವ ಎಲ್ಲರಿಗೂ ಲಾರಿಗಳಿಗೂ ಕೆಲಸ ಸಿಗುತ್ತದೆ ಎಂದು ಭಾವಿಸುತ್ತೇನೆ, ನಮ್ಮ ಹಳ್ಳಿಯವರಿಗೆ ಕೆಲಸ ಸಿಗುವುದು ಗ್ಯಾರಂಟಿ ಇದೆ ನಮ್ಮ ಹಳ್ಳಿಯವರಿಗೆ ಎಲ್ಲಾ ಅನುಕೂಲ ಮಾಡಿದ್ದಾರೆ, ಅದೇ ರೀತಿಯಾಗಿ ನಮಗೆ ಹಳ್ಳಿಗೆ ಬರುವುದಕ್ಕೆ ರಸ್ತೆ ಇಲ್ಲ ಗಿಣಿಗೇರಾ ಇಂದ ಕಾಸನಕಂಡಿ, ಹಿರೇಬಗನಾಳ ಹಾಲವರ್ತಿ ವರೆಗೂ ರಸ್ತೆ ಸಮಸ್ಯೆ ಇದೆ. ಇದರ ಬಗ್ಗೆ ಡಿ.ಸಿ ಸಾಹೇಬ್ರು ಗಮನ ಹರಿಸಬೇಕು ಇದಕ್ಕೆ ವೈಯಕ್ತಿಕ ಮುತುವರ್ಜಿ ವಹಿಸಿ ಕನಕಾಪೂರದಲ್ಲಿ ಕೋವೀಡ್-19 ಆಸ್ಪತ್ರೆ ಕಟ್ಟಿದ್ದಾರೆ, ಒಳ್ಳೆಯ ಆಸ್ಪತ್ರೆ ಇದೆ, ಎಲ್ಲರ ಪರವಾಗಿ ನಮಸ್ಕರಿಸುತ್ತೇನೆ. ಡಿ.ಸಿ ಸಾಹೇಬ್ರು ಆಸ್ಪತ್ರೆ ಯಾವ ರೀತಿ ಆಸ್ಪತ್ರೆ ಕಟ್ಟಿದ್ದಾರೆ ಅದೇ ರೀತಿ ಗಿಣಿಗೇರಾ ಇಂದ ಹಿರೇಬಗನಾಳ ರಸ್ತೆಯನ್ನು ಅಭಿವೃದ್ಧಿಗೋಳಿಸಿ ಕಾಮಗಾರಿ ಮುಗಿಸುತ್ತಾರೆಂದು ಹೇಳಿ ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾದಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**13) ಶ್ರೀ ಅಬ್ದುಲ್ ವಾಹೀದ್, ಹೊಸಹಳ್ಳಿ**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೆ, ಸುತ್ತ ಮುತ್ತಲಿನ ಗ್ರಾಮದ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ, ಸದಸ್ಯರಿಗೆ ಹಾಗೂ ಗುರು ಹಿರಿಯರಿಗೆ ಹಾಗೂ ಹಿರಿಯರಿಗೂ ನನ್ನ ನಮಸ್ಕಾರ. ಈ ಕಂಪನಿ ತಯಾರಿಕೆಯಲ್ಲಿ ತುಂಬಾ ಸಂತೋಷವಾಗುತ್ತಿದೆ. ಗ್ರಾಮಕ್ಕೇ ಭೇಟಿ ನೀಡಿರುವುದು ಸಂತೋಷವಾಗುತ್ತಿದೆ. ಗುಡ್ಡದಲ್ಲಿ ಗಣಿಗಾರಿಕೆ ಮೈನಿಂಗ್ ಮಾಡುತ್ತಿರುವುದು ಎಲ್ಲರಿಗೂ ಒಳ್ಳೆಯ ಸುದ್ದಿ, ಹಾಗೇ ಒಳ್ಳೆ ಕೆಲಸನು ಹೌದು, ಕಾಸನಕಂಡಿ ಮತ್ತು ಕಂಪನಿಯವರು ಒಟ್ಟಾಗಿ ಕೆಲಸ ಮಾಡಬೇಕು ಕಂಪನಿಯವರಿಗೆ ಊರು ಬೇಕು ಊರಿನವರಿಗೆ ಕಂಪನಿ ಬೇಕು ಸಿಸ್ಟಮೇಟಿಕ್ ಮಾಡಿ ಗಣಿಗಾರಿಕೆ ನಡೆಸುತ್ತಾರೆ, ಈ ಕಂಪನಿಗಳಾದರೆ ಯುವಕರಿಗೆ ಶಕ್ತಿ ಬರುತ್ತದೆ ನಮ್ಮಂತಹ ಸಂಸಾರಗಳು ಬದುಕುತ್ತವೆ. ಕಂಪನಿಯಲ್ಲಿ ನೌಕರಿಯಾದರೆ ನಮ್ಮ ಅಕ್ಕ ತಂಗಿಯರಿಗೆ ಅಣ್ಣ ತಮ್ಮಂದಿರಿಗೆ ಮದುವೆ ಮಾಡಬಹುದು, ಕಂಪನಿಯಿಂದ ಊರಿಗೆ ಒಳ್ಳೆಯದಾಗಲಿ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾದಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**14) ಶ್ರೀ ಹನುಮಂತಪ್ಪ ಹಿರೇಮನಿ, ಹೊಸಹಳ್ಳಿ**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೆ, ಸುತ್ತ ಮುತ್ತಲಿನ ಗ್ರಾಮದ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ, ಸದಸ್ಯರಿಗೆ ಹಾಗೂ ಗುರು ಹಿರಿಯರಿಗೆ ಹಾಗೂ ಹಿರಿಯರಿಗೂ ನನ್ನ ನಮಸ್ಕಾರ. ಹಿರೇಕಾಸನಕಂಡಿ ಗ್ರಾಮ ಮತ್ತು ಸುತ್ತ ಮುತ್ತಲಿನ ಎಲ್ಲಾ ಹಳ್ಳಿಗಳಿಗೆ ಅನುಕೂಲವಾಗುವಂತೆ ಕಾರ್ಯಕ್ರಮವನ್ನು

ಹಮ್ಮಿಕೊಂಡಿದ್ದಾರೆ, ಮೈನಿಂಗ್ ಕಂಪನಿಗಳು ಬಂದರೆ ನಮ್ಮ ಗ್ರಾಮಕ್ಕೆ ಮತ್ತು ಊರಿಗೆ ಅಭಿವೃದ್ಧಿಯಾಗಲು ಮುನ್ನುಡಿಯಾಗುತ್ತದೆ ಎಂದು ಹೇಳಲು ಬಯಸುತ್ತೇನೆ. ಸುತ್ತಮುತ್ತಲಿನಿಂದ ಆಗಮಿಸಿರುವ ಅಧ್ಯಕ್ಷರು ಮತ್ತು ಸದಸ್ಯರಿಗೆ ಮನವಿಯೇನೆಂದರೆ, ನಾವು ಕಂಪನಿಗೆ ಸಹಕಾರ ಮಾಡಿದರೆ ನಮ್ಮ ಊರು ನಮ್ಮ ಗ್ರಾಮ ಅಭಿವೃದ್ಧಿಯಾಗುತ್ತದೆ ಎಂದು ಹೇಳಲು ಬಯಸುತ್ತೇನೆ, ಸುತ್ತಮುತ್ತಲಿನ ಗ್ರಾಮಗಳಿಗೆ ಕಾಸನಕಂಡಿ ಗ್ರಾಮಕ್ಕೆ ಆರೋಗ್ಯ ಕೇಂದ್ರಕ್ಕೆ ಸಹಕಾರ ಮಾಡಬೇಕು ಹಾಗೂ ಸುತ್ತಮುತ್ತಲಿನ ಎಲ್ಲಾ ಹಳ್ಳಿಗಳಿಗೆ ಅನುಕೂಲ ಮಾಡಬೇಕು. ಸುತ್ತಮುತ್ತಲಿನ ಗ್ರಾಮಗಳಿಗೆ ಶಿಕ್ಷಣಕ್ಕೆ ಒತ್ತು ನೀಡಿ ಐ.ಟಿ.ಐ ಕೇಂದ್ರ ತೆರೆಯಬೇಕು. ಕಂಪನಿಯಲ್ಲಿ ಅನೇಕ ರೀತಿಯಿಂದ ಕೆಲಸ ಮಾಡುತ್ತಾರೆ. ಅವರ ಕುಟುಂಬಗಳು ಅಭಿವೃದ್ಧಿ ಹೊಂದುತ್ತವೆ. ತುಂಗಭದ್ರಾ ನೀರು ಅನುಕೂಲವಾಗಿದೆ ಪರಿಸರ ಚೆನ್ನಾಗಿದೆ ವಾತಾವರಣ ಚೆನ್ನಾಗಿದೆ ಅದನ್ನು ಅದೇ ರೀತಿ ಕಾಪಾಡಬೇಕು ನೀವು ನಿಮ್ಮ ಕಂಪನಿಯಲ್ಲಿ ಕೆಲಸ ಕೊಟ್ಟರೆ ನೂರಾರು ಕುಟುಂಬಗಳು ಬದುಕುತ್ತವೆ, ಕಾಸನಕಂಡಿ, ಗಿಣಿಗೇರಾ, ಅಲ್ಲಾನಗರ, ಹೊಸಹಳ್ಳಿ ಎಲ್ಲಾ ಗ್ರಾಮಗಳು ಹಿಂದುಳಿದ ಗ್ರಾಮಗಳಾಗಿವೆ. ಕಂಪನಿಗಳು ಬಂದರೆ ನಮ್ಮ ಮಕ್ಕಳು ಹಾಗೂ ಎಲ್ಲರಿಗೂ ಕೆಲಸ ಸಿಗುತ್ತದೆ. ಕಂಪನಿಗಳು ಬಂದರೆ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಲು ಅನುಕೂಲವಾಗುತ್ತದೆ.

ಮುನಿರಾಬಾದ್ ಗ್ರಾಮದಿಂದ 108 ಬರುವುದಕ್ಕೆ ರಸ್ತೆಗಳ ಸಮಸ್ಯೆ ಆಗುತ್ತದೆ. ಕಾಸನಕಂಡಿ, ಗಿಣಿಗೇರಾ, ಹಿರೇಬಗನಾಳ ಗ್ರಾಮದಲ್ಲಿ ಸಣ್ಣ ಪುಟ್ಟ ಗ್ರಾಮಗಳಲ್ಲಿ ಆರೋಗ್ಯ ಕೇಂದ್ರಗಳಿಗೆ ಸಹಕಾರ ನೀಡಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಹಕಾರ ನೀಡಬೇಕು ಶಿಕ್ಷಣಕ್ಕೆ ಹೆಚ್ಚಿನ ಆಧ್ಯತೆ ನೀಡಿ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾದಿಕಾರಿಗಳಿಗೆ ಹಾಗೂ ತಹಶಿಲ್ದಾರ್ ಅಧಿಕಾರಿಗಳಿಗೂ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**15)ಶ್ರೀ ಹುಚ್ಚಪ್ಪ ಕಾಸನಕಂಡಿ**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗ, ಸುತ್ತ ಮುತ್ತಲಿನ ಗ್ರಾಮದ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ, ಸದಸ್ಯರಿಗೆ ಹಾಗೂ ಗುರು ಹಿರಿಯರಿಗೆ ಹಾಗೂ ಹಿರಿಯರಿಗೂ ನನ್ನ ನಮಸ್ಕಾರ ಸ್ಥಳೀಯರಿಗೆ ಯಾರಿಗೂ ಕೆಲಸ ನೀಡುವುದಿಲ್ಲ ಸ್ಥಳೀಯರನ್ನು ಬಿಟ್ಟು ಬೇರೆಯವರಿಗೆ ಕೆಲಸ ನೀಡುತ್ತಾರೆ, ಯಾವ ಕಂಪನಿಯವರನ್ನು ಬೇಕಾದರು ಕೇಳಿ ಅವರು ಏನು ಓದಿದ್ದಾರೆ ಅದನ್ನು ಬಿಟ್ಟು ಬೇರೆ ಕೆಲಸ ನೀಡುತ್ತಾರೆ. ಎಂದು ಹೇಳಿ ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾದಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**16)ಶ್ರೀ ಬಸವರಾಜ್ ಪೂಜಾರ್, ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷರು**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೆ, ಸುತ್ತ ಮುತ್ತಲಿನ ಗ್ರಾಮದ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ, ಸದಸ್ಯರಿಗೆ ಹಾಗೂ ಗುರು ಹಿರಿಯರಿಗೆ ಹಾಗೂ ಹಿರಿಯರಿಗೂ ನನ್ನ ನಮಸ್ಕಾರ ಈ ಮೈನಿಂಗ್ ಬಂದಿರುವುದು ನಮಗೆ ಒಳ್ಳೆಯದು, ಇದರಿಂದ ಈ ಮೈನಿಂಗ್ ನಿಂದ ನಮಗೆ ಒಳ್ಳೆಯದಾಗುತ್ತೆ ಎನ್ನುವ ನಂಬಿಕೆ ನಮಗಿದೆ. ಎಂದು ಹೇಳಿ ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾದಿಕಾರಿಗಳಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**17)ಶ್ರೀ ಬಿ.ವಿ. ರೆಡ್ಡಿ ಸಾಮಾಜಿಕ ಕಾರ್ಯಕರ್ತ**

ಸಭೆಯ ಅಧ್ಯಕ್ಷತೆ ವಹಿಸಿದಂತಹ ಗೌರವಾನ್ವಿತ ಮಾನ್ಯ ಜಿಲ್ಲಾಧಿಕಾರಿಗಳಿಗೂ, ತಹಶೀಲ್ದಾರ್ ರವರಿಗೆ ಮತ್ತು ಸುತ್ತ ಮುತ್ತಲಿನ ಗ್ರಾಮದ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ, ಸದಸ್ಯರಿಗೆ ಹಾಗೂ ಗುರು ಹಿರಿಯರಿಗೆ ಹಾಗೂ ಹಿರಿಯರಿಗೂ ನನ್ನ ನಮಸ್ಕಾರ. ಚಿಕ್ಕ ಕಾಸನಕಂಡಿ ವಿಷಯವಾಗಿ ಈಗಾಗಲೇ 15 ಜನ ಮಾತನಾದ್ದಾರೆ ನಾನು

ಕಂಪನಿಯವರಿಗೆ ಮಾತಾಡಿದ್ದೇನೆ ಈ ಮೈನಿಂಗ್ ನಿಂದ ಎಲ್ಲಾ ಅನುಕೂಲಗಳನ್ನು ಮಾಡಲು ಕೋರುತ್ತೇನೆ. ರೈತರಿಗೆ ಸಭೆಯ ಬಗ್ಗೆ ತಿಳಿಸಬೇಕು, ಕಂಪನಿಯವರು ಹಳ್ಳಿಯವರನ್ನು ಸೇರಿಸಿಕೊಂಡು ಒಂದು ಕಮಿಟಿ ಮಾಡಿ ಅನುಕೂಲ ಮಾಡಿಕೊಡಿ, ಸಿ.ಎಸ್.ಆರ್ ಹಣದಲ್ಲಿ ಹಳ್ಳಿಯವರ ಜೊತೆ, ಪಂಚಾಯತಿ ಯವರ ಜೊತೆ ಸೇರಿ ಅನುಕೂಲ ಮಾಡಿಕೊಡಿ, ಅವಕಾಶ ನೀಡಿದ ಜಿಲ್ಲಾಧಿಕಾರಿಗಳಿಗೂ ಮತ್ತು ಸಭೆಯಲ್ಲಿ ಹಾಜರಿರುವ ಎಲ್ಲರಿಗೂ ಅಭಿನಂದನೆಗಳು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ನೀಡಿದ ಜಿಲ್ಲಾದಿಕಾರಿಗಳಿಗೆ ಹಾಗೂ ತಹಶಿಲ್ದಾರ್ ಅಧಿಕಾರಿಗಳಿಗೂ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ ಎಂದು ಸಭೆಗೆ ತಿಳಿಸಿದರು.

**ಶ್ರೀ ವಿಕಾಸ್ ಕಿಶೋರ್ ಸುರಳ್ಕರ್, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು,** ಕೊಪ್ಪಳ ಇವರು, ಕೊಪ್ಪಳ ತಾಲೂಕಿನ ಚಿಕ್ಕಕಾಸನಕಂಡಿ ಗ್ರಾಮದ ಸರ್ವೆ ನಂ 25 ರ ವಿಸ್ತೀರ್ಣ 20 ಎಕರೆ ಜಮೀನಿನಲ್ಲಿ ಕ್ವಾಡ್ಜ್ ಕಲ್ಲು ಗಣಿ ಗುತ್ತಿಗೆ ಸಂಖ್ಯೆ: 2253 ಗಣಿಗಾರಿಕೆಗಾಗಿ ಪರವಾನಿಗೆಯನ್ನು 20 ವರ್ಷಗಳ ಹಿಂದೆ 1999 ರಲ್ಲಿ ನೀಡಿದ್ದು, ಇಲ್ಲಿಯವರೆಗೂ ಯಾವ ಕಾರಣಕ್ಕಾಗಿ ಗಣಿ ಮಾಲೀಕರು ಕಾರ್ಯಾಚರಣೆ ಪ್ರಾರಂಭ ಮಾಡಿಲ್ಲ ಎಂದು ಅಭಿಪ್ರಾಯ ಮಂಡಿಸಲು ತಹಶೀಲ್ದಾರ್ ಮೂಲಕ ಗಣಿ ಯೋಜನೆಯ ಮಾಲೀಕರಿಗೆ ವಿವರಣೆ ನೀಡಲು ತಿಳಿಸಲಾಯಿತು.

ಗಣಿ ಮಾಲೀಕರ ಪರವಾಗಿ ಮೆ. ಗ್ಲೋಬಲ್ ಎನ್ವಿರಾನ್ಮೆಂಟ್ & ಮೈನಿಂಗ್ ಸರ್ವಿಸಸ್‌ನ ಶ್ರೀ ಕಾಮೇಶ್ವರರಾವ್ ಇವರು ಸದರಿ ಪ್ರದೇಶದ ಗಣಿ ಗುತ್ತಿಗೆ ನವೀಕರಣಗೊಂಡು 20 ವರ್ಷಗಳಾದರು ಈ ಹಿಂದೆ ಕ್ವಾಡ್ಜ್ ಕಲ್ಲು ಕಚ್ಚಾ ಪದಾರ್ಥಕ್ಕೆ ಕೊಪ್ಪಳ ಸುತ್ತಮುತ್ತಲಿನ ಪ್ರದೇಶದಲ್ಲಿ ಬೇಡಿಕೆ ಇಲ್ಲದಿರುವ ಕಾರಣ ಗಣಿಗಾರಿಕೆಯನ್ನು ಪ್ರಾರಂಭ ಮಾಡಿರಲಿಲ್ಲ ಪ್ರಸ್ತುತ ಜೆ.ಎಸ್.ಡಬ್ಲ್ಯೂ ಕೈಗಾರಿಕೆಗೆ 60,000 ಟನ್ ಪ್ರತಿ ತಿಂಗಳಿಗೆ ಬೇಕಾಗಿರುವ ಕಾರಣ ಗಣಿಗಾರಿಕೆಯನ್ನು ಈಗ ಪ್ರಾರಂಭಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಸಭೆಯನ್ನು ಉದ್ದೇಶಿಸಿ ಶ್ರೀ ಹುಚ್ಚಪ್ಪ ರೈತರು ಇವರು ಮತ್ತು ತಹಶೀಲ್ದಾರ್, ಕೊಪ್ಪಳ ರವರು ತಿಳಿಸಿದಂತೆ ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಯ ಜಮೀನುಗಳ ಸರ್ವೆ ನಂಬರ್‌ಗಳ ಜಮೀನುಗಳಿದ್ದು ಕೆಲವು ಜಮೀನುಗಳಿಗೆ ಈಗಾಗಲೇ ಹಂಚಲಾಗಿದೆ. ಸರ್ಕಾರದ ಬಳಿ ಉಳಿದಿರುವ 20 ಎಕರೆ ಜಮೀನಿನಲ್ಲಿ 1999 ರಲ್ಲಿ ಗಣಿ ಉದ್ದಿಮೆದಾರರಿಗೆ ಗಣಿಗಾರಿಕೆಗಾಗಿ ಪರವಾನಿಗೆ ನೀಡಲಾಗಿದೆ. ಈಗ ಸದರಿ ಗಣಿಗಾರಿಕೆ ಪರವಾನಿಗೆ ಪರವಾನಿಗೆಯು 2019 ರಲ್ಲಿ ನವೀಕರಣಗೊಂಡಿದೆ. ನವೀಕರಣವನ್ನು ಕಂದಾಯ ಇಲಾಖೆಯ ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ತಹಶೀಲ್ದಾರ್ ವರದಿಯನ್ನು ಆಧರಿಸಿ ನವೀಕರಣ ನೀಡಲಾಗಿದೆ. ಕಳೆದ 20 ವರ್ಷಗಳಿಂದ ಗಣಿಗಾರಿಕೆಯು ನಡೆದಿರುವುದಿಲ್ಲ. ಈ ಭಾಗದ ರೈತರಿಂದ ಜಮೀನುಗಳ ಸರ್ವೆ ನಂಬರ್‌ಗಳ ವಿವರ ಪಡೆಯಲಾಗುವುದು. ಹಾಗೂ ಸ್ಥಳೀಯರಿಗೆ ಉದ್ಯೋಗ ನೀಡುವ ಬಗ್ಗೆ ಮತ್ತು ಈ ಭಾಗದ ರಸ್ತೆಗಳ ಅಭಿವೃದ್ಧಿಗೊಳಿಸುವ ಬಗ್ಗೆ ಚಿಂತಿಸಲಾಗುವುದು. ಮೈನಿಂಗ್ ಪ್ರದೇಶದ ಗುಡ್ಡದಲ್ಲಿ ಅರಣ್ಯ ಪ್ರದೇಶವು ಸಹ ಇರುವುದು ಕಂಡು ಬರುತ್ತದೆ. ಗಣಿ ಮಾಲೀಕರು ಸದರಿ ಯೋಜನೆಯ ಹೆಸರನ್ನು ನ್ಯಾಷನಲ್ ಮೈನಿಂಗ್ ಬದಲು ಬೇರೆ ಹೆಸರು ಇಡಲು ಚಿಂತಿಸಬೇಕೆಂದು ತಿಳಿಸಿದರು. ಈ ಭಾಗದ ರಸ್ತೆಯಲ್ಲಿ ಓಡಾಡುವ ವಾಹನಗಳು ಅತಿ ಭಾರವಾದ ಕಚ್ಚಾ ವಸ್ತುಗಳನ್ನು ಸಾಗಾಣಿಕೆ ಮಾಡದಂತೆ ಗಣಿಗಾರಿಕೆಯವರು ಕ್ರಮ ವಹಿಸಬೇಕಾಗಿದೆ. ಈ ಸಭೆಯಲ್ಲಿ ಸ್ಥಳೀಯ ರೈತರು ಹಾಗೂ ಸಾರ್ವಜನಿಕರು ತಿಳಿಸಿರುವ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

ಮುಂದುವರೆದು ತಹಶೀಲ್ದಾರ ಕೊಪ್ಪಳ ಇವರು ಉದ್ದೇಶಿತ ಜಮೀನಿನ ಪೈಕಿ ಮಂಜೂರಾತಿ ಆಗಿರುವ ಫಲಾನುಭವಿಗಳ ವಿವರ ಹಾಗೂ ಮಂಜೂರಾದ ವಿಸ್ತೀರ್ಣ ಮತ್ತು ಸದರಿ ಜಮೀನಿನಲ್ಲಿ ಲಭ್ಯವಿರುವ ವಿಸ್ತೀರ್ಣದ ದಾಖಲೆಗಳನ್ನು ಪುನರ್ ಪರಿಶೀಲಿಸಬೇಕಾಗಿದ್ದು, ಕಾಲಾವಕಾಶ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು. ಮಾನ್ಯ

ಜಿಲ್ಲಾಧಿಕಾರಿಗಳು ಮಾತನಾಡಿ ಉದ್ದೇಶಿತ ಕೊಪ್ಪಳ ಗ್ರಾಮದ ಚಿಕ್ಕಕಾಸನಕಂಡಿ ಗ್ರಾಮದ ಸ.ನಂ: 25 ರಲ್ಲಿ ಮಂಜೂರಾಗಿರುವ ಫಲಾನುಭವಿಗಳ ಹೆಸರಿಗೆ ಪಟ್ಟಾ ಆಗಿರುವ ಬಗ್ಗೆ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ತಹಶೀಲ್ದಾರ ಇವರಿಗೆ ಸೂಚನೆಗಳನ್ನು ನೀಡಿದರು. ಮುಂದುವರೆದು ಮಂಜೂರಾದ ಫಲಾನುಭವಿಗಳ ವಿಚಾರಣೆಯನ್ನು ಜರುಗಿಸಿ ತಹಶೀಲ್ದಾರ, ಕೊಪ್ಪಳ ಇವರ ವರದಿಯ ಆಧಾರದ ಮೇರೆಗೆ ಅಗತ್ಯವೆನಿಸಿದ್ದಲ್ಲಿ ಮತ್ತೊಮ್ಮೆ ಸಾರ್ವಜನಿಕ ಅಹವಾಲು ಕಾರ್ಯಕ್ರಮವನ್ನು ಜರುಗಿಸಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ರವಾನಿಸಲಾಗುವುದು ಎಂದು ತಿಳಿಸಿದರು.

ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಂದನಾರ್ಪಣೆಯೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ವಿಕಾಸ್ ಕಿಶೋರ್ ಸುರಳ್ಕರ್ ಭಾ.ಆ.ಸೇ.)
ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು
ಪರಿಸರ ಸಾರ್ವಜನಿಕ ಆಲಿಕೆ ಸಭೆ ಅಧ್ಯಕ್ಷರು,
ಕೊಪ್ಪಳ, ಕರ್ನಾಟಕ